



# ಟೆನ್ನಿಸ್ ಬಾಲ್ ಮರ!

■ ಎಂ.ಆರ್. ಮಂಜುನಾಥ್

ಬೆಂಗಳೂರಿನ ಸಸ್ಯಕಾಶಿಯೆಂದೇ ಹೆಸರು ಪಡೆದಿರುವ ಲಾಲ್‌ಬಾಗ್ ಕೆರೆಯ ದಂಡೆಯ ಮೇಲೆ ಒಂದು ಸುತ್ತು ಹೊರಟಿದ್ದೆ. ಹಾಗೇ ನಡೆದಾಡುವಾಗ ಕಣ್ಸೆಳೆದದ್ದು ಒಂದು ವಿಶೇಷವಾದ, ಟೆನ್ನಿಸ್ ಬಾಲ್ ಆಕಾರದ ಹೂವಿನ ಮರ.

ನಮ್ಮ ಸುತ್ತಮುತ್ತ ಹಲವು ರೀತಿಯ ಗಿಡಮರಗಳು ಕಂಡುಬರುತ್ತವೆ. ಆದರೆ ಅವುಗಳ ಕುರಿತು ಅರಿವಿರುವುದು ಕಡಿಮೆ. ಹಾಗೇ ಈ ಮರದ ಗುರುತಿನ ಹಿಂದೆ ಬಿದ್ದಾಗ ಹಲವು ಸಂಗತಿಗಳು ತಿಳಿದುಬಂದವು.

ಸ್ಥಳೀಕರು ಈ ಮರವನ್ನು ‘ಶಿವಲಿಂಗದ ಮರ’ ಎಂದು ಕರೆಯುತ್ತಾರೆ. ಆದರೆ ಶಿವಲಿಂಗದ ಮಾದರಿಯಲ್ಲಿ ಹೂವಾಗಲೀ ಕಾಯಿಯಾಗಲೀ ಇಲ್ಲ. ಆಫ್ರಿಕಾ ಮೂಲದ ಈ ಅಪರೂಪದ ಮರ ಹೈದರಾಬಾದಿನ ಗೋಲ್ಕೊಂಡ, ಮಹಮದನ್ ಉದ್ಯಾನಗಳಲ್ಲಿ ಕಂಡುಬರುತ್ತದೆ. ಈ ಮರದ ಹೂವು, ಕಾಯಿಗಳಲ್ಲಿ ಡಿಸೆಂಬರ್–ಜನವರಿ ಅವಧಿಯಲ್ಲಿ ‘ಟೆನ್ನಿಸ್ ಬಾಲ್’ ಆಕಾರ ಬರುವಂತೆ ನಯವಾದ ಹೂವಿನ ತಲೆಗಳು ಕಾಣಿಸುತ್ತವೆ. ಈ ಆಕಾರದ ಕಾರಣಕ್ಕೇ ಅದೇ ಹೆಸರನ್ನು ಮರಕ್ಕೂ ಕರೆಯುವುದು ರೂಢಿಯಲ್ಲಿದೆ.

ಚಳಿಗಾಲದಲ್ಲಿ ಎಲೆಯ ಅಕ್ಷದಿಂದ ನೇತಾಡುವ ಒಂದೂವರೆ ಅಡಿ ಶಾಖೆಗಳು, ತುಕ್ಕು ಬಣ್ಣದ ಮಣಿಯಂತಹ ಹೂವಿನ ತಲೆಗಳು ಕ್ರಮೇಣ ಟೆನ್ನಿಸ್ ಚೆಂಡಿನ ಗಾತ್ರ ಪಡೆದುಕೊಳ್ಳುತ್ತವೆ. ಸ್ಥಳೀಕರು ಚೆಂಡಲ್ ಅಥವಾ ಟೆನ್ನಿಸ್ ಚೆಂಡು ಎಂದು ಇದನ್ನು ಕರೆಯುತ್ತಾರೆ. ಅದ್ಭುತವಾದ ದುಂಡಗಿನ ಬಿಳಿ ಹೂವುಗಳು ಚೆಂಡು ಹಾಗೂ ಬಲ್ಬ್ ಆಕಾರದಲ್ಲಿ ಗಮನಸೆಳೆಯುತ್ತದೆ. ಇದರ ಬೀಜಗಳ ಸುತ್ತ ಇರುವ ತಿರುಳನ್ನು ಖಾದ್ಯಗಳಿಗೆ ಬಳಸಲಾಗುತ್ತದೆ. ಬೀಜಗಳು ಬೆಳ್ಳುಳ್ಳಿಯಂಥ ರುಚಿ ಹೊಂದಿರುತ್ತವೆ. ಉದ್ದ ಎಲೆಗಳು ಈ ಮರದ ಮತ್ತೊಂದು ವೈಶಿಷ್ಟ್ಯ. ■


